



# ಕತ್ತಿನ ಸುತ್ತ ಕಾಮನಬಿಲ್ಲು

**ಸಾಂಪ್ರದಾಯಿಕ ಸೀರೆ– ಚೂಡಿದಾರ್‌ಗಳಿಗೂ, ಜೀನ್ಸ್, ಫ್ರಾಕ್, ಸ್ಕರ್ಟ್‌ನಂತಹ ಆಧುನಿಕ ಉಡುಗೆಗಳಿಗೂ ಮ್ಯಾಚಿಂಗ್ ಆಗುವಂತಹ ಆಕ್ಸೆಸ್ಸರಿ ತೊಡುವುದು ಫ್ಯಾಷನ್ ಕ್ಷೇತ್ರದಲ್ಲಿ ಟ್ರೆಂಡ್ ಆಗಿಬಿಟ್ಟಿದೆ.**

■ ಎಸ್ಸೆಚ್

ಸಾಂಪ್ರದಾಯಿಕ ಸೀರೆ, ಚೂಡಿದಾರ್ ಧರಿಸಿರಲಿ ಅಥವಾ ಆಧುನಿಕ ಉಡುಗೆಗಳಾದ ಜೀನ್ಸ್, ಫ್ರಾಕ್, ಸ್ಕರ್ಟ್ ತೊಟ್ಟಿರಲಿ ಆ ಉಡುಪಿಗೆ ಹೊಂದುವಂತಹ ಆಕ್ಸೆಸ್ಸರಿಗೆ ಒತ್ತು ನೀಡುವುದು ಫ್ಯಾಷನ್ ಕ್ಷೇತ್ರದಲ್ಲಿ ಟ್ರೆಂಡ್ ಆಗಿಬಿಟ್ಟಿದೆ. ಕತ್ತು, ಕಿವಿ, ಕೈ, ಬೆರಳು, ಕಾಲುಗಳಿಗೆ ಒಂದಿಷ್ಟು ಆಭರಣಗಳನ್ನು ಹಾಕಿಕೊಂಡರೇ ಆ ವಸ್ತ್ರಕ್ಕೆ ಒಂದು ರೀತಿಯ ಶೋಭೆ. ಈ ಒಡವೆಗಳು ದುಬಾರಿ ಪ್ಲಾಟಿನಂ, ಚಿನ್ನ, ಬೆಳ್ಳಿ ಅಥವಾ ಅಮೂಲ್ಯ ಹರಳುಗಳಾದ ವಜ್ರ, ಮಾಣಿಕ್ಯ, ಪಚ್ಚೆ, ನೀಲವನ್ನು ಕೂಡ್ರಿಸಿದವುಗಳಾಗಬೇಕು ಎಂದೇನೂ ಇಲ್ಲ. ಅರೆ ಅಮೂಲ್ಯ ಹರಳುಗಳಲ್ಲಿ ಬರುವ ಜೇಡ್, ಅಗೇಟ್, ಒನಿಕ್ಸ್, ಅಮೆಥಿಸ್ಟ್, ಹವಳ, ಮುತ್ತು, ಕ್ರಿಸ್ಟಲ್, ಗಾರ್ನೆಟ್, ಟೋಪಾಜ್, ಝಿರ್ಕೋನ್‌ಗಳ ನೆಕ್ಲೇಸ್, ಉದ್ದನೆಯ ಸರ, ಬಳೆ, ಬ್ರೇಸ್‌ಲೆಟ್, ಕಿವಿಯೋಲೆಗಳನ್ನಾಗಿ ವಿನ್ಯಾಸ ಮಾಡಿಕೊಂಡು ಧರಿಸುವುದು ಫ್ಯಾಷನ್‌ಪ್ರಿಯರಿಗೆ ಅಚ್ಚುಮೆಚ್ಚು.

ಆಭರಣ ವಿನ್ಯಾಸಕಾರರ ಹಾಗೂ ಸಂಗ್ರಹಕಾರರ ನೆಚ್ಚಿನ ಕಲ್ಲು ಜೇಡ್. ಈ ಕಲ್ಲಿನಲ್ಲಿರುವ ವಿವಿಧ ಖನಿಜಾಂಶಗಳ ಮೇಲೆ ಹಸಿರು, ಬಿಳಿ, ಕಪ್ಪು, ಕೆಂಪು, ಕಂದು, ನೇರಳೆ, ಗುಲಾಬಿ ಬಣ್ಣಗಳಲ್ಲಿ ಲಭ್ಯವಿದ್ದರೂ ಹಸಿರು ವರ್ಣದ ಜೇಡ್ ಜನಪ್ರಿಯ. ದುಂಡನೆಯ, ಚಪ್ಪಟೆಯ ಹಾಗೂ ಉದ್ದನೆಯ ಆಕಾರದಲ್ಲಿ ಕತ್ತರಿಸಲಾಗುವ ಜೇಡ್ ಅಂತಹ ದುಬಾರಿ ಏನಲ್ಲ. ಇದನ್ನು ಬೆಳ್ಳಿ ಅಥವಾ ವೈಟ್ ಮೆಟಲ್‌ನಲ್ಲಿ ವಿನ್ಯಾಸ ಮಾಡಿ ಧರಿಸಬಹುದು. ಹಸಿರು ರಂಗಿನ ಫ್ಯಾಷನ್ ಸೀರೆಗಳಿಗೆ ಇದು ಒಳ್ಳೆಯ ಸಾಥ್ ನೀಡುತ್ತದೆ. ಹಾಗೇ ಕುರ್ತಾ ಮೇಲೂ ಧರಿಸಬಹುದು. ಜೇಡ್ ಜೊತೆ ವೈಟ್ ಮೆಟಲ್ ಗುಂಡುಗಳನ್ನು ಸೇರಿಸಿ ಆಕರ್ಷಕ ವಿನ್ಯಾಸದ ನೆಕ್ಲೇಸ್ ಮಾಡಿಕೊಳ್ಳಬಹುದು.

ಎಲ್ಲಾ ಬಣ್ಣಗಳಲ್ಲೂ ದೊರಕುವ ಅಗೇಟ್ ಸಾದಾ ಅಥವಾ ಪಟ್ಟೆಗಳನ್ನು ಹೊಂದಿರುತ್ತದೆ. ಕಂದು ಅಥವಾ ಆಕಾಶ ನೀಲಿ ಅಗೇಟ್ ಅತ್ಯಂತ ಆಕರ್ಷಕ. ಬೆಲೆಯೂ ಕಡಿಮೆ. 5–6 ಮಾಲೆಗಳನ್ನು ಒಟ್ಟಿಗೆ ಸೇರಿಸಿ ಟ್ವಿಸ್ಟ್ ಮಾಡಿದ ನೆಕ್ಲೇಸ್ ಧರಿಸಿದರೆ ಯಾವ ಚಿನ್ನದ ಒಡವೆಯೂ ಬೇಡ, ಅಷ್ಟು ಅದ್ಭುತವಾಗಿ ಕಾಣುತ್ತದೆ.

ನೇರಳೆ, ಊದಾ ರಂಗಿನ ಅಮೆಥಿಸ್ಟ್ ಅನ್ನು ಈ ಮೊದಲು ಅಮೂಲ್ಯ ಹರಳುಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಆದರೆ ಬ್ರೆಜಿಲ್ ಮತ್ತು ಉರುಗ್ವೆಯಲ್ಲಿ ಈ ಹರಳುಗಳ ನಿಕ್ಷೇಪ ಅಪಾರ ಪ್ರಮಾಣದಲ್ಲಿ ಪತ್ತೆಯಾಗಿದ್ದರಿಂದ ಇದನ್ನು ಅರೆ ಅಮೂಲ್ಯ ಹರಳುಗಳ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಇದು ಅತ್ಯಂತ ಗಟ್ಟಿ ಹರಳಾಗಿದ್ದು ನೆಕ್ಲೇಸ್, ಪೆಂಡೆಂಟ್‌ನಲ್ಲಿ ಬಳಸಬಹುದು.

ಸಾವಯವ ವಸ್ತು ಹವಳ. ಕಡಲಲ್ಲಿ ಪ್ರಾಣಿಜನ್ಯವಾದ ಈ ಹವಳ ಬಿಳಿ ಮತ್ತು ಅರೆಗೆಂಪು ಬಣ್ಣದಲ್ಲಿ ದೊರಕುತ್ತಿದ್ದು ಸ್ವಲ್ಪ ದುಬಾರಿ. ಆದರೆ ಫ್ಯಾಷನ್‌ಪ್ರಿಯರು ಹವಳದ ಪೌಡರ್‌ನಿಂದ ಮಾಡುವ ಹವಳಗಳ ಮಾಲೆಯನ್ನು ಬೇಕಾದಷ್ಟು ಧರಿಸಬಹುದು. ಇದು ಅರೆಗೆಂಪು, ಕಡುಗೆಂಪು ಬಣ್ಣದಲ್ಲೂ ಲಭ್ಯ. ಮಾಲೆಗಳ ಮಧ್ಯೆ ಚಿನ್ನದ ಬಣ್ಣದ ಗುಂಡುಗಳನ್ನು ಸೇರಿಸಿ ಪೋಣಿಸಬಹುದು. 10–12 ಎಳೆಗಳನ್ನು ಒಟ್ಟಿಗೆ ಸೇರಿಸಿ ಧರಿಸಿದರೆ ಎಥ್ನಿಕ್ ಲುಕ್ ಬರುತ್ತದೆ.

ಹಸಿರುಪ್ರಿಯರು ಜೇಡ್ ಮೊರೆ ಹೋದರೆ, ನೀಲಿಯ ಮೋಹವುಳ್ಳವರು ಲ್ಯಾಪಿಸ್ ಸರ ಧರಿಸಬಹುದು. ಕಡುನೀಲಿ ರಂಗಿನ ಈ ಕಲ್ಲು ಅಗ್ಗ ಕೂಡಾ. ವಿವಿಧ ಆಕಾರಗಳಲ್ಲಿ ಕತ್ತರಿಸಲಾಗುವ ಈ ಕಲ್ಲು ಅಲ್ಪ ಭಾರ.

ಕಪ್ಪು ರಂಗಿನ ಒನಿಕ್ಸ್ ಅತ್ಯಂತ ಹೊಳಪಿನ ಕಲ್ಲು. ಈ ಕಲ್ಲಿನ ಮೇಲೆ ಕೆತ್ತನೆ ಮಾಡಿದರಂತೂ ಇನ್ನೂ ಅದ್ಭುತ. ಇದು ಕೂಡಾ ಅಗ್ಗವೇ. 600– 700 ರೂಪಾಯಿಗೆ ಒಂದು ಸರ ಲಭ್ಯ. ಬಿಳಿ ಕೊರಳಿನ ಸುತ್ತ ಈ ಕಪ್ಪು ಬಣ್ಣದ ಮಣಿಗಳು ಅಂದವಾಗಿ ಕಾಣುತ್ತವೆ.

ಕಪ್ಪು ಕೆಂಪಿನ ಗಾರ್ನೆಟ್ ಜೊತೆಗೆ ಈಗ ಪಚ್ಚೆ ವರ್ಣದ ಗಾರ್ನೆಟ್ ಕೂಡಾ ಸಿಗುತ್ತದೆ. ಕ್ರಿಸ್ಟಲ್ ಆಕಾರದಲ್ಲಿರುವ ಇವುಗಳ ಎರಡು ಎಳೆ ಸರವನ್ನು ಪದಕದ ಜೊತೆ ಜೋಡಿಸಿಕೊಳ್ಳಬಹುದು. ಎಲ್ಲಾ ವರ್ಣಗಳಲ್ಲಿ ದೊರಕುವ ಕ್ರಿಸ್ಟಲ್ ಅತ್ಯಂತ ಅಗ್ಗದ ಹರಳು. ಹಲವು ರಂಗಿನ ಕ್ರಿಸ್ಟಲ್‌ಗಳನ್ನು 10–12 ಎಳೆಗಳನ್ನಾಗಿ ಮಾಡಿ ಹಾಕಿಕೊಂಡರೆ ಮಿನುಗುವ ನಕ್ಷತ್ರಗಳನ್ನೇ ಮೈಮೇಲೆ ಧರಿಸಿದಂತೆ ಕಾಣುತ್ತದೆ. ನೀಲಿ, ಹಳದಿ, ಹಸಿರು, ಕಿತ್ತಳೆ ಮೊದಲಾದ ಬಣ್ಣಗಳಲ್ಲಿ ಲಭ್ಯ ಇರುವ ಝಿರ್ಕೋನ್‌ಗಳನ್ನು ಕಿವಿಯೋಲೆಯಾಗಿ ಧರಿಸಬಹುದು.

ಎಲ್ಲಾ ಬಣ್ಣದ ಹರಳುಗಳ ಮಧ್ಯೆ ಮುತ್ತುಗಳನ್ನು ಮರೆಯಲಾದೀತೆ? ಬಿಳಿ, ತಿಳಿ ಹಳದಿ, ಗುಲಾಬಿ, ಬೂದು, ಕಪ್ಪು ರಂಗಿನ ಮುತ್ತುಗಳ ಎಳೆಗಳು ಸೀರೆ ಹಾಗೂ ಆಧುನಿಕ ಉಡುಪಿಗೆ ಶೋಭೆ ನೀಡುತ್ತವೆ. ವಿವಿಧ ಆಕಾರಗಳಲ್ಲಿ ಲಭ್ಯವಿದ್ದರೂ ದುಂಡಗಿನ ಮುತ್ತು ರಾಯಲ್ ಗತ್ತು ನೀಡುತ್ತದೆ.

ಈ ಅರೆ ಅಮೂಲ್ಯ ಹರಳುಗಳ ಜೊತೆ ಕಂಚು, ಹಿತ್ತಾಳೆ ಲೋಹ, ಮರ, ಗಾಜು, ಗ್ರಾನೈಟ್‌ನ ಆಭರಣಗಳು ಮಾರುಕಟ್ಟೆಗೆ ದಾಂಗುಡಿ ಇಟ್ಟಿವೆ. ಯಾವುದೇ ದಿರಿಸಿನ ಜೊತೆ ಮಿಕ್ಸ್ ಆ್ಯಂಡ್ ಮ್ಯಾಚ್ ಕೂಡಾ ಮಾಡಬಹುದು. ■